**ಓ ಎಸ್ ನಂಃ** 173/2018

**ಪಿಡಬ್ಲ್ಯೂ**: 02

**ದಿನಾಂಕಃ 27.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು**

**ಪಾಟಿ ಸವಾಲುಃ ಶ್ರೀ ಆರ್.ಎಸ್.ಎಂ., 1 , 3 ರಿಂದ 8 ನೇ ಪ್ರತಿವಾದಿ ಪರ ವಕೀಲರಿಂದ**

ಕೆರೆಯಾಗಳಹಳ್ಳಿ ಗ್ರಾಮದಲ್ಲಿ ನನಗೆ ಸೇರಿದ ಸರ್ವೆ ನಂಬರ್ 70 ವಿಸ್ತೀರ್ಣ 3 ಎಕರೆ 14 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನಿನ ಪೂರ್ವಃ ರಾಮಣ್ಣನ ಜಮೀನು, ಪಶ್ಚಿಮಃ ತಿಪ್ಪೇಸ್ವಾಮಿ, ಶಿವಣ್ಣ ಮತ್ತು ವೆಂಕಟೇಶ್ ರವರ ಜಮೀನು, ಉತ್ತರಃ ಗೌರಣ್ಣನ ಜಮೀನು, ದಕ್ಷಿಣಃ ಕೆಳಗಳ ಮನೆಯ ಮಾರಯ್ಯನ ಜಮೀನು. ಸದರಿ ಜಮೀನು ನನಗೆ ಸೇರಿರುತ್ತದೆ ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

**ಓ ಎಸ್ ನಂಃ 173/2018**

**ಪಿಡಬ್ಲ್ಯೂ: 02**

ನಾನು ಈ ಹಿಂದೆ ಸಾಕಷ್ಟು ದಾವೆಗಳಲ್ಲಿ ಸಾಕ್ಷಿದಾರನಾಗಿ ವಿಚಾರಣೆ ನೀಡಿರುತ್ತೇನೆ ಎಂದರೆ ಸಾಕ್ಷಿಯು ಬೇರೆ ಎರಡು ದಾವೆಗಳಲ್ಲಿ ಸಾಕ್ಷಿ ವಿಚಾರಣೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ತಳಕು ಹೋಬಳಿ ಸುತ್ತಮುತ್ತಲ ಗ್ರಾಮಗಳಿಗೆ ಸಂಬಂಧಿಸಿದ ಜಮೀನುಗಳಿಗೆ ನಾನು ಸಾಕ್ಷಿದಾರನಾಗಿ ವಿಚಾರಣೆ ನೀಡುತ್ತೇನೆ ಎಂದರೆ ಸರಿಯಲ್ಲ.

ಈ ದಾವೆಯನ್ನು ರಾಮಾಂಜನಮ್ಮ ಎಂಬುವವರು ರಾಮಣ್ಣನ ಹೆಂಡತಿ ಮಕ್ಕಳ ವಿರುದ್ಧ ಸಲ್ಲಿಸಿರುತ್ತಾರೆ. ವೆಂಕಟಪ್ಪ ಮತ್ತು ಮಕ್ಕಳು 2006 ರಲ್ಲಿ ಪಾಲು ವಿಭಾಗ ಮಾಡಿಕೊಂಡಿದ್ದರು. ಸದರಿ ಪಾಲು ವಿಭಾಗ ಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುವುದಿಲ್ಲ. ಸದರಿ ಪಾಲು ವಿಭಾಗ ಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಪಾಲು ವಿಭಾಗ ಪತ್ರದ ಪ್ರಕಾರ ರಾಮಣ್ಣನ ಭಾಗಕ್ಕೆ ಸರ್ವೆ ನಂಬರ್ 70 ರ ಜಮೀನಿನಲ್ಲಿ 30 ಗುಂಟೆ ಜಮೀನು ಬಂದಿರುತ್ತದೆ. 1 ರಿಂದ 3 ನೇ ಪ್ರವದಿಯವರಿಗೆ ಸದರಿ ಪಾಲು ವಿಭಾಗ ಪತ್ರದ ಪ್ರಕಾರ ಸರ್ವೆ ನಂಬರ್ 70 ರ ಜಮೀನಿನಲ್ಲಿ ತಲಾ 30 ಗುಂಟೆ ಜಮೀನು ಬಂದಿರುತ್ತದೆ.

2006 ರ ಪಾಲು ವಿಭಾಗ ಪತ್ರದಲ್ಲಿ ಬೇರೆ ಆಸ್ತಿಗಳನ್ನು ವಿಭಾಗ ಮಾಡಿಕೊಳ್ಳಲಾಗಿರುತ್ತದೆ. ಸದರಿ ಜಮೀನುಗಳ ಸರ್ವೆ ನಂಬರ್ ಹಾಗೂ ಹಿಸ್ಸಾ ಭಾಗಗಳನ್ನು ಹೇಳಲು ಆಗುವುದಿಲ್ಲ. ಪಾಲು ವಿಭಾಗ ಪತ್ರ ಆದ ಒಂದು ವಾರದ ನಂತರ 1 ನೇ ವಾದಿ ಸದರಿ ಪಾಲು ವಿಭಾಗ ಪತ್ರವನ್ನು ನನಗೆ ತೋರಿಸಿರುತ್ತಾರೆ. 1 ನೇ ವಾದಿಯ ಪಾಲು ವಿಭಾಗ ಪತ್ರವನ್ನು ತೋರಿಸಿದ ನಂತರ ವಿಲ್ ಪತ್ರ ಆಗಿರುವುದಿಲ್ಲ ಎಂದು ನನಗೆ ತಿಳಿದಿರುತ್ತದೆ. 2006 ರ ಪಾಲು ವಿಭಾಗ ಅದ ನಂತರ ವಾದಿ ಮತ್ತು ಪ್ರತಿವಾದಿಯರ ಕುಟುಂಬದಲ್ಲಿ ಏನೇನು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. 2006 ರ ನಂತರ ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ಏನೇನು ಪತ್ರಗಳು ಆಗಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ.

ಪಾಲು ವಿಭಾಗ ತಿದ್ದುಪಡಿ ಮಾಡಿರುವುದಕ್ಕೆ ಸಂಬಂಧಿಸಿದಂತೆ ತಹಸೀಲ್ದಾರ್ ರವರು ಆದೇಶ ಮಾಡಿದ ಬಗ್ಗೆ ನನಗೆ ಗೊತ್ತಿರುತ್ತದೆ. ಪಾಲು ವಿಭಾಗ ಪತ್ರ ತಿದ್ದುಪಡಿಯಾದ ಬಗ್ಗೆ ನಾನು ಖುದ್ದು ನೋಡಿರುತ್ತೇನೆ. ಪಾಲು ವಿಭಾಗ ಪತ್ರವನ್ನು ಪತ್ರ ಬರಹಗಾರರಾದ ಶಿವಣ್ಣರವರು ತಿದ್ದುಪಡಿ ಮಾಡಿರುತ್ತಾರೆ. ಪಾಲು ವಿಭಾಗ ಪತ್ರವನ್ನು ಬರೆದು ಕೊಡುವಾಗಲೇ ತಿದ್ದುಪಡಿ ಮಾಡಲಾಗಿರುತ್ತದೆ. ಪಾಲು ವಿಭಾಗ ಪತ್ರ ತಿದ್ದುಪಡಿಯಾಗಿದ್ದನ್ನು ನಾನು ನೋಡಿದಾಗ ನನ್ನ ಜೊತೆ ಯಾರು ಇರಲಿಲ್ಲ.

**ಓ ಎಸ್ ನಂಃ 173/2018**
**ಪಿಡಬ್ಲ್ಯೂ: 02**

ನಾನು ನೋಡಿದ ತಿದ್ದುಪಡಿಯಾದ ಪಾಲು ವಿಭಾಗ ಪತ್ರವು 2006 ಇಸ್ವಿಗೆ ಸಂಬಂಧಿಸಿದ್ದು ದಿನಾಂಕ, ತಿಂಗಳು ಹೇಳಲು ಆಗುವುದಿಲ್ಲ. 2006 ರಲ್ಲಿ ವೆಂಕಟಪ್ಪ ಮತ್ತು ಅವರ ಮಕ್ಕಳ ನಡುವೆ ಪಾಲು ವಿಭಾಗ ಪತ್ರ ಆಗಿತ್ತು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ 2006 ರಲ್ಲಿ ಯಾವುದೇ ಪಾಲು ವಿಭಾಗ ಪತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರು ಸ್ವಾಧೀನದಲ್ಲಿರುವ 30 ಗುಂಟೆ ಜಮೀನಿನ ಚಕ್ಕುಬಂದಿ ಪೂರ್ವಃ ರಾಮಣ್ಣನ ಜಮೀನು, ಪಶ್ಚಿಮಃ ರಾಮಣ್ಣನ ತಮ್ಮನ ಜಮೀನು, ಉತ್ತರಃ ಗೌರಣ್ಣನ ಜಮೀನು, ದಕ್ಷಿಣಃ ಕೆಳಗಳ ಮನೆ ಮಾದಯ್ಯನ ಜಮೀನು ಬರುತ್ತದೆ. ಸದರಿ ಚಕ್ಕುಬಂದಿಯಲ್ಲಿ ವಾದಿಯರು ಸ್ವಾಧೀನಾನುಭವದಲ್ಲಿರುತ್ತಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ವಾದಿಯರು 30 ಗುಂಟೆ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆ ಎಂಬುವುದಕ್ಕೆ ಸಂಬಂಧಿಸಿದಂತೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ. 1 ರಿಂದ 3 ನೇ ಪ್ರತಿವಾದಿಯರು ದಾವಾ ಷೆಡ್ಯೂಲ್ ಸ್ವತ್ತಿನ ಉಳಿದ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿರುತ್ತದೆ ಎಂಬುವುದಕ್ಕೆ ಸಂಬಂಧಿಸಿದಂತೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ.

ವೆಂಕಟಪ್ಪನ ಹೆಣ್ಣು ಮಕ್ಕಳು ಯಾವ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. 4 ರಿಂದ 8 ನೇ ಪ್ರತಿವಾದಿಯರು ದಾಖಲೆಗಳನ್ನು ಸೃಷ್ಟಿಸಿರುತ್ತಾರೆ . ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ದಾಖಲೆಗಳನ್ನು ಸೃಷ್ಟಿಸಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಯಾವ ಅಸ್ತಿಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ನಾನು ಬೇರೆಯವರ ಜಮೀನಿನಲ್ಲಿ ಬೇಸಾಯ ಮಾಡುವುದಿಲ್ಲ. ಗ್ರಾಮದಲ್ಲಿ ಯಾವ ದಿನಾಂಕ, ತಿಂಗಳು ಮತ್ತು ವರ್ಷ ದಂದು ಪಂಚಾಯಿತಿ ಮಾಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ವೆಂಕಟಪ್ಪನ ಕುಟುಂಬದ ಸಂಬಂಧಿ ಅಲ್ಲ.

ದಿನಾಂಕ 30.05.2003 ರಂದು ವೆಂಕಟಪ್ಪ ಮತ್ತು ವೆಂಕಟಪ್ಪನ ಮಕ್ಕಳು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 30.05.2003 ರಲ್ಲಿ ಪಾಲು ವಿಭಾಗ ಪತ್ರದ ಪ್ರಕಾರ 1 ನೇ ವಾದಿಗೆ ತಿಮ್ಮಪ್ಪನಹಳ್ಳಿ ಸರ್ವೆ ನಂಬರ್ 169 ರಲ್ಲಿ 25 ಗುಂಟೆ, ಕೆರೆಯಾಗಳಹಳ್ಳಿ ಸರ್ವೆ ನಂಬರ್ 70 ರಲ್ಲಿ 1 ಎಕರೆ 5 ಗುಂಟೆ ಜಮೀನು, ತಿಮ್ಮಪ್ಪಯ್ಯನಹಳ್ಳಿ ಗ್ರಾಮದಲ್ಲಿ ಮಾಳಿಗೆ ಮನೆ ಮತ್ತು ನಿವೇಶನ ಬಂದಿರುತ್ತದೆ ಎಂದರೆ ಸರಿಯಲ್ಲ. 1 ನೇ ವಾದಿಯು ಇವತ್ತಿನವರೆಗೊ ಸದರಿ

ಸ್ವತ್ತುಗಳ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 30.05.2003 ರ ಪಾಲು ವಿಭಾಗ ಪತ್ರದ ನಂತರ ವಾದಿ ಮತ್ತು ಪ್ರತಿವಾದಿಯರು ಅವರ ಕುಟುಂಬದಲ್ಲಿ ಯಾವುದೇ ಪಾಲು ವಿಭಾಗ ಪತ್ರವನ್ನು ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಅನುಕೂಲ ಮಾಡುವ ಸಲುವಾಗಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸುಳ್ಳು ಅಂಶಗಳನ್ನು ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ ಅಕ್ಕಪಕ್ಕ ನನ್ನ ಜಮೀನು ಇರುವುದಿಲ್ಲ. ತಿಮ್ಮಪ್ಪನಹಳ್ಳಿ ಗ್ರಾಮದಿಂದ ಕೆರೆಯಾಗಳಹಳ್ಳಿ ಗ್ರಾಮಕ್ಕೆ ಸುಮಾರು 1 ರಿಂದ 1 ವರೆ ಕೀ ಮೀ ಅಂತರ ಇರುತ್ತದೆ.

ವೆಂಕಟಪ್ಪ ರವರು ದಿನಾಂಕ 30.05.2003 ರ ಪಾಲು ವಿಭಾಗದ ಪ್ರಕಾರ ಸದರಿಯವರುಗಳ ಹೆಸರಿಗೆ ಬಂದ ಜಮಿನನ್ನು 4 ರಿಂದ 8 ನೇ ಪ್ರತಿವಾದಿಯರ ಹೆಸರಿಗೆ ದಿನಾಂಕ 25.05.2004 ರಂದು ಮರಣ ಶಾಸನ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮರಣ ಶಾಸನ ಪತ್ರವನ್ನು ನೊಂದಣಿ ಮಾಡಿಸಲಾಗಿರುತ್ತದೆ ಎಂದರೆ ಸರಿಯಲ್ಲ. ವೆಂಕಟಪ್ಪ ಜೀವಂತ ಇದ್ದಾಗ ನಾನು ಆತನನ್ನು ನೋಡಿರುತ್ತೇನೆ. ವೆಂಕಟಪ್ಪರವರು ಮೃತರಾಗುವವರೆಗೂ ಆರೋಗ್ಯವಾಗಿ ಸುಸ್ಥಿತಿಯಲ್ಲಿದ್ದರು. ವೆಂಕಟಪ್ಪನ ಭಾಗಕ್ಕೆ ಬಂದ ಜಮೀನಿನಲ್ಲಿ ಸದರಿಯವರೇ ಸ್ವಾಧೀನಾನುಭವದಲ್ಲಿದ್ದರು ಎಂದರೆ ಸರಿ. ವೆಂಕಟಪ್ಪ ರವರ ಹಕ್ಕು ಭಾಗಕ್ಕೆ ಬಂದ ಸ್ವತ್ತನ್ನು 4 ರಿಂದ 8 ನೇ ಪ್ರತಿವಾದಿಯವರಿಗೆ ಮರಣ ಶಾಸನ ಪತ್ರ ಬರೆದಿರುವ ವಿಚಾರ ಗೊತ್ತಿರುವ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 30.05.2003 ರ ಪಾಲು ವಿಭಾಗ ಪತ್ರದಲ್ಲಿ 4 ರಿಂದ 8 ನೇ ಪ್ರತಿವಾದಿಯರ ಪಕ್ಷಗಾರರಾಗಿ ಇರುವುದಿಲ್ಲ ಎಂದರೆ ಸರಿ. ಸದರಿ ಪಾಲು ವಿಭಾಗ ಪತ್ರದಲ್ಲಿ 4 ರಿಂದ 8 ನೇ ಪ್ರತಿವಾದಿಯವರಿಗೆ ಯಾವುದೇ ಹಿಸ್ಸೆ ನೀಡಿಲ್ಲ ಎಂದರೆ ಸರಿ. ವೆಂಕಟಪ್ಪರವರು ಪಾಲು ವಿಭಾಗ ಪತ್ರದಲ್ಲಿ ಹೆಣ್ಣು ಮಕ್ಕಳಿಗೆ ಹಿಸ್ಸೆಯನ್ನು ನೀಡಿದ ಕಾರಣ ಸದರಿಯವರ ಮರಣಾ ನಂತರ ಅವರ ಭಾಗಕ್ಕೆ ಬಂದ ಆಸ್ತಿಯನ್ನು 4 ರಿಂದ 8 ನೇ ಪ್ರತಿವಾದಿಯರಿಗೆ ಸೇರಲಿ ಎಂಬ ಉದ್ದೇಶದಿಂದ ಮರಣ ಶಾಸನ ಪತ್ರ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತನ್ನು ಸಾಗುವಳಿ ಮಾಡುವಾಗ ಪ್ರತಿವಾದಿಯವರು ಬಂದು ಅಡ್ಡಿ ಪಡಿಸಿ ಜಗಳ ನಡೆದಿರುತ್ತದೆ ಎಂದು ಹೇಳುವುದು ಸುಳ್ಳು ಎಂದರೆ ಸಾಕ್ಷಿಯು ಯಾವುದೇ ಗಲಾಟೆ ನಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ಗಲಾಟೆಯ ವಿಚಾರವಾಗಿ ಪಂಚಾಯಿತಿಯನ್ನು ಮಾಡಿರುವುದಿಲ್ಲ , ಆದರೆ ಜಮೀನಿನ ಹಂಚಿಕೆ ವಿಚಾರವಾಗಿ ಗಲಾಟೆ ಮಾಡಲಾಗಿರುತ್ತದೆ.

**ಓ ಎಸ್ ನಂಃ** 173/2018

**ಪಿಡಬ್ಲ್ಯೂ.:** 02

ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ 4 ರಿಂದ 8 ನೇ ಪ್ರತಿವಾದಿಯರು ಸ್ವಾಧೀನದಲ್ಲಿರುವುದಿಲ್ಲ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ದಿನಾಂಕ 30.05.2003 ರ ಪಾಲು ವಿಭಾಗ ಪತ್ರದಲ್ಲಿ 1 ನೇ ವಾದಿಯ ಭಾಗಕ್ಕೆ ಬಂದಿರುವ ಆಸ್ತಿಗಳನ್ನು ಹೊರತು ಪಡಿಸಿ ಬೇರೆ ಆಸ್ತಿಗಳಲ್ಲಿ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 30.05.2003 ರ ಪಾಲು ವಿಭಾಗದ ಪ್ರಕಾರ ಅವರವರ ಹಿಸ್ಸಾ ಭಾಗಗಳಲ್ಲಿ ಅವರವರೇ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿ. 1 ನೇ ವಾದಿಯ ಹೆಸರಿಗೆ ಖಾತೆಯಾಗಿರುವ ಬಗ್ಗೆ ನನಗೆ ತಿಳಿದಿರುತ್ತದೆ. ವೆಂಕಟಪ್ಪನ ಹಿಸ್ಸೆಗೆ ಬಂದ ಜಮೀನಿನಲ್ಲಿ ವಾದಿಯರಿಗೆ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸಾಕ್ಷಿಯ 1 ನೇ ವಾದಿಯ ಹಿಸ್ಸೆಗೆ ಬಂದ ಜಮೀನನ್ನು ಹೊರತು ಪಡಿಸಿ ಬೇರೆ ಜಮೀನಿನಲ್ಲಿ ಹಕ್ಕು ಅಧಿಕಾರ ಇರುವುದಿಲ್ಲ ಎಂದು ನುಡಿಯುತ್ತಾರೆ .

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.